ವಿದ್ಯುತ್ ಟಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ಸರಾಸರಿ ನಷ್ಟ

680 - ಶ್ರೀ ರಾಮಲಿಂಗರೆಡ್ಡಿ (ಜಯನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿದ್ಯುತ್ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟದ ರಾಷ್ಟ್ರೀಯ ಸರಾಸರಿ ಶೇಕಡವಾರು ಎಷ್ಟು?*

ಆ) *ರಾಜ್ಯದ ಸರಾಸರಿ ಶೇಕಡವಾರು ನಷ್ಟ ಎಷ್ಟು?*

ಇ) *ಈ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟವನ್ನು ಕಡಿಮೆ ಮಾಡಲು ಕೈಗೊಂಡ ಕ್ರಮಗಳೇನು?*

ಈ) *ಖಾಸಗಿ ವಿದ್ಯುತ್ ಕಂಪನಿಗಳಲ್ಲಿ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟಗಳು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವುದು ಸರ್ಕಾರಕ್ಕೆ ಗಮನಕ್ಕೆ ಬಂದಿದೆಯೇ?*

ಉ) *ಹಾಗಿದ್ದಲ್ಲಿ ರಾಜ್ಯ ವಿದ್ಯುತ್ ಟ್ರಾನ್ಸ್‌ಮಿಷನ್ಸ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟ ರಾಷ್ಟ್ರೀಯ ಸರಾಸರಿಗಿಂತ ಹೆಚ್ಚಾಗಲು ಕಾರಣಗಳೇನು?*

ಶ್ರೀ ಜೆ.ಹೆಚ್. ಪಟೇಲ್ (ಉಪ ಮುಖ್ಯಮಂತ್ರಿಗಳು) :

ಅ) 1993-94ನೇ ಸಾಲಿನ ಮಾಹಿತಿ ಪ್ರಕಾರ ವಿದ್ಯುತ್ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟದ ರಾಷ್ಟ್ರೀಯ ಶೇಕಡವಾರು ಪ್ರಮಾಣ 24.46 ಆಗಿದೆ.

ಆ) 1993-94 ಮತ್ತು 1994-95ರ ಸಾಲುಗಳಲ್ಲಿ ರಾಜ್ಯದ ಸರಾಸರಿ ಶೇಕಡವಾರು ನಷ್ಟ 18.6

ಇ) ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟವನ್ನು ಕಡಿಮೆಗೊಳಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡುತ್ತಿದೆ. ಈ ಸುಧಾರಣೆಯ ಕ್ರಮವಾಗಿ ಪ್ರತಿವರ್ಷವು ಹೊಸ ಟ್ರಾನ್ಸ್‌ಮಿಷನ್ ಲೈನುಗಳನ್ನು ಮತ್ತು ಹೊಸ ಸಬ್ ಸ್ಟೇಷನ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಅಲ್ಲದೇ ಅಗತ್ಯವಿರುವ ಸ್ಥಳಗಳಲ್ಲಿ ಸಬ್ ಸ್ಟೇಷನ್‌ಗಳ ಸಾಮರ್ಥ್ಯವನ್ನು ಹೆಚ್ಚಿಸಲಾಗುತ್ತಿದೆ. ವಿದ್ಯುತ್ ವಿತರಣೆಯ ವ್ಯವಸ್ಥೆಯ ಸುಧಾರಣೆಗಾಗಿ ಕಪಾಸಿಟರ್ ಬ್ಯಾಂಕರ್‌ಗಳನ್ನು ಅಳವಡಿಸಲಾಗುತ್ತಿದೆ. ಎಕ್ಸ್‌ಪ್ರೆಸ್ ಫೀಡರ್‌ಗಳನ್ನು ನಿರ್ಮಾಣ ಮಾಡಲಾಗುತ್ತಿದೆ. ಟ್ರಾನ್ಸ್‌ಫಾರ್ಮರ್‌ಗಳ ಪುನರ್ ವಿಂಗಡಣೆ ವಿದ್ಯುತ್ ತಂತಿಗಳ ಬಲಪಡಿಸುವಿಕೆ ಇತ್ಯಾದಿ ವ್ಯವಸ್ಥೆ ಸುಧಾರಣೆ ಕ್ರಮಗಳನ್ನು ನಿರ್ವಹಿಸಲಾಗುತ್ತಿದೆ.

ಈ) ಉ) ರಾಜ್ಯದ ವಿದ್ಯುತ್ ಟ್ರಾನ್ಸ್‌ಮಿಷನ್ ಮತ್ತು ಡಿಸ್ಟ್ರಿಬ್ಯೂಷನ್ ನಷ್ಟವು ರಾಷ್ಟ್ರೀಯ ಸರಾಸರಿಗಿಂತ ಕಡಿಮೆ ಇರುವುದರಿಂದ ಇದು ಉದ್ಭವಿಸುವುದಿಲ್ಲ.

ರಾಜ್ಯ ಸರ್ಕಾರವು ಜವಾಹರ್ ರೋಜಗಾರ್ ಯೋಜನೆ ಇಂದಿರಾ ಅವಾಜ್‌ಯೋಜನೆಯ ಹಾಗೂ ಇತರ ಯೋಜನೆಗಳಲ್ಲಿ ಖರ್ಚು ಮಾಡಿರುವ ಹಣ

678 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತಿ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯ ಸರ್ಕಾರವು 1995-96ರಲ್ಲಿ ಇಲ್ಲಿಯವರೆಗೆ ಜೆಆರ್‌ವೈ, ಇಂದಿರಾ ಅವಾಸ್ ಯೋಜನೆ, ಮಿಲಿಯನ್ ವೆಲ್ ಯೋಜನೆ ಹಾಗೂ ಐಆರ್‌ಡಿಪಿ ಯೋಜನೆಗಳಲ್ಲಿ ಖರ್ಚು ಮಾಡಿರುವ ಹಣವೆಷ್ಟು?*

ಅ) ಈ ಯೋಜನೆಗಳಲ್ಲಿ ಮೀಸಲಿಟ್ಟಿದ್ದ ಹಣದಲ್ಲಿ ಶೇಕಡಾ ಎಷ್ಟು ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಲಾಗಿದೆ?

ಆ) ಕೇಂದ್ರ ಸರ್ಕಾರದಿಂದ ಈ ಯೋಜನೆಗಳಿಗೆ ಬಂದಿರುವ ಹಣವೆಷ್ಟು?

ಈ) ಈ ಯೋಜನೆಗಳಿಗೆ ನಿಗದಿಪಡಿಸಿರುವ ಹಣವನ್ನು 31-3-96ರೊಳಗೆ ಖರ್ಚು ಮಾಡಲಾಗುವುದೇ?

ಶ್ರೀ ಎಂ.ಸಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ರಾಜ್ಯ ಸರ್ಕಾರವು 95-96ನೇ ಸಾಲಿಗೆ (31-1-96ರವರೆಗೆ) ಖರ್ಚು ಮಾಡಿದ ವಿವರ ಕೆಳಗಿನಂತಿದೆ.

			(ಲಕ್ಷ ರೂ.ಗಳಲ್ಲಿ)
1.	ಜೆಆರ್‌ವೈ	:	12816.176
2.	ಇಂದಿರಾ ಆವಾಸ್ ಯೋಜನೆ	:	3148.768
3.	ಮಿಲಿಯನ್ ವೆಲ್	:	1715.386
4.	ಐ.ಆರ್.ಡಿ.ಪಿ.	:	3288.136

ಆ) ಖರ್ಚು ಮಾಡಲಾದ ಶೇಕಡಾವಾರು ಪ್ರಮಾಣ ಕೆಳಗಿನಂತಿದೆ.

1.	ಜೆಆರ್‌ವೈ	:	ಶೇಕಡಾ 60
2.	ಇಂದಿರಾ ಆವಾಸ್ ಯೋಜನೆ	:	ಶೇಕಡಾ 47
3.	ಮಿಲಿಯನ್ ವೆಲ್	:	ಶೇಕಡಾ 58
4.	ಐ.ಆರ್.ಡಿ.ಪಿ.	:	ಶೇಕಡಾ 68

ಇ) ಕೇಂದ್ರ ಸರ್ಕಾರದಿಂದ ಬಂದಿರುವ ಹಣದ ವಿವರ ಈ ಕೆಳಗಿನಂತಿದೆ.

			(ಲಕ್ಷ ರೂ.ಗಳಲ್ಲಿ)
1.	ಜೆಆರ್‌ವೈ	:	8437.88
2.	ಇಂದಿರಾ ಆವಾಸ್ ಯೋಜನೆ	:	2606.68
3.	ಮಿಲಿಯನ್ ವೆಲ್ ಯೋಜನೆ	:	1166.28
4.	ಐ.ಆರ್.ಡಿ.ಪಿ.	:	1268.260

ಈ) ಈ ಯೋಜನೆಗಳಡಿ ನಿಗದಿಪಡಿಸಿರುವ ಅನುದಾನವನ್ನು 31-3-96ರೊಳಗಾಗಿ ಎಧ್ಯವಾದಷ್ಟು ಸಂಪೂರ್ಣವಾಗಿ ಉಪಯೋಗಿಸಲು ಕ್ರಮ ಕೈಗೊಳ್ಳಲು ಮುಖ್ಯ ಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಂಗಳೂರು ಸಮೀಪದ ದೊಡ್ಡ ಆಲದಮರ ಕಣ್ವಾ ಜಲಾಶಯ ಮುಂತಾದ ವಾಸ ಸ್ಥಳ ಅಭಿವೃದ್ಧಿ

682 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮವು ರಜತ ಮಹೋತ್ಸವ ವರ್ಷದ ಸಂದರ್ಭದಲ್ಲಿ ಪ್ರವಾಸೀ ಸ್ಥಳಗಳನ್ನು ಅಭಿವೃದ್ಧಿಪಡಿಸುವ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆಯೇ?